ದಂತೆ ಮತ್ತು ಸರಿಯಾದ ರೀತಿಯಲ್ಲಿ ಉಪಯೋಗವಾಗುವಂತೆ ತಕ್ಕ ಕಾರ್ಯಕ್ರಮ ಹಾಕಿ ಕೊಳ್ಳುವಿರಾ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಆ ಪಿಲ್ಲೆಯನ್ನು ಉಪಯೋಗ ಮಾಡಿಕೊಳ್ಳಬೇಕೆಂಬ ಇಚ್ಛೆಯಿದೆ. ಹಣ ಸಿಕ್ಕಿದಂತೆ ಅದನ್ನು ಉಪಯೋಗ ಮಾಡುವರು.

ಶ್ರೀ ಟಿ.ಆರ್. ಶಾಮಣ್ಣ.—ಈಗ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಬಂಡು ಕಟ್ಟಿರುವುದು ಮತ್ತು ರಸ್ತೆಮಾಡಿರುವುದು ಹಾಳಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಬಂಡ್ ಕೊಚ್ಚಿ ಹೋಗಿದೆ ಎಂದು ಹೇಳುತ್ತಿದ್ದೀರಿ ?

ಶ್ರೀ ಟಿ.ಆರ್. ಶಾಮಣ್ಣ.—ಹಿಂದೆ ಕ್ಷಾಮಬಂದಿದ್ದ ಕಾಲದಲ್ಲಿ ಜನರಿಗೆ ಕೂಲಿ ದೊರೆಯುವಂತೆ ಮಾಡುವುದಕ್ಕಾಗಿ ಕೊಳಗಳ ಪಕ್ಕದಲ್ಲಿ ಮತ್ತು ರಸ್ತೆಗಳ ಪಕ್ಕದಲ್ಲಿ ಅಲ್ಲಲ್ಲಿ ಬಂಡುಗಳನ್ನು ಮಾಡಿಸಿದ್ದರು—ಅವು ಕಿತ್ತುಹೋಗುತ್ತಿವೆ ಎಂದು ಹೇಳಿದೆ...

(ಉತ್ತರವಿಲ್ಲ)

ಶ್ರೀ ಎಂ. ಬಿ. ರಾಮಸ್ವಾಮಿ.- ಹಿಂದೆ 1973-74ರಲ್ಲಿ ಕ್ಷಾಮ ನಿವಾರಣೆಗಾಗಿ 33.39 ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಯಿತೆಂದು ಇಲ್ಲಿ ತಿಳಿಸಲಾಗಿದೆ. ಆದರೆ ಈ ವರ್ಷ ಕೂಡ ರಾಜ್ಯದ ಅನೇಕ ಭಾಗಗಳಲ್ಲಿ ಮಳೆ ಇಲ್ಲದೆ ಜನರಿಗೆ ಜೀವನಕ್ಕೆ ಬಹಳ ತೊಂದರೆಯಾಗಿದೆ. ಆದುದರಿಂದ 1975-76ನೇ ಸಾಲಿಗೂ ಪರಿಹಾರವನ್ನು ಒದಗಿಸಲು ಪ್ರಯತ್ನಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ. ಆಗ್ಗೆ ಆ ಪ್ರದೇಶದಲ್ಲಿ ಬಂದಿದ್ದ ದುಷ್ಕಾಲದ ಪರಿಸ್ಥಿತಿಗಿಂತ ಬೇರೆ ಈಗ ಮಾನ್ಯ ಸದಸ್ಯರು ಹೇಳುತ್ತಿರುವ ಕ್ಷಾಮದ ಪರಿಸ್ಥಿತಿಯೇ ಬೇರೆ.

Allotment of Urea to Hospet

239. Sri B. SATHYANARAYANA SINGH (Hospet).—

Will the Minister for Agriculture and Animal Hxsbandry be pleased to state :—

(*a*) whether it is a fact that about 41 tonnes of Urea was allotted to some farmers of Hospet Taluk some time in the month of April, May and June 1974;

(*b*) if so the particulars regarding the names of the farmers, extent of land held by them and crop grown ;

(*c*) the basis for such allotment ;

(*d*) whether it has come to the notice of Government that discrimination between the ryots growing the same crop has been made, while alloting the urea ;

(*e*) if so, the steps taken to stop such discrimination ?

Sri N. CHIKKE GOWDA (Minister four Agriclture and Animal Husbandry).—

(*a*) Yes.

(SRI N. CHIKKE GOWDA)

(*b*) —	*Sriyuths*	*Acre-Cents*
1	V. Rama Rao	20
2	V. Basavapurnaiah	17
3	A. Sambasiva Rao	9
4	V. Venkateswara Rao	9
5	Y. Rama Rao	21
6	Y. Krishna Rao	18
7	V. Ghandhi	8
8	P.R.V. Prasad	13
9	Ramamohan Rao	12
10	P. Ankinudu	16
11	P. Madasudan Rao	10
12	B. Jaggaiah	20
13	Y. Rama Rao	24
14	D. Vimala Devi	8
15	N. Veeraiah	6
16	G. Rangarao	20
17	G. Bullibabu	9
18	G. Venkataramaiah	11.5
19	Durgavenkataswararao	7
20	L. V. Krishnaiah	5
21	Chowdri	6
22	K Kakuleshwara Rao	81.27
23	K. Srikrishna Rao	21.78
2	V. Ramakrishna Verma	34.13
25	K. Eswara Rao	64.47
26	K. Seetaramaiah	70.30
27	K. Saibabu	91.76
28	Mohan Rao	39.00
29	B. Radakrishna	25.60
30	K. Koteshwara Rao	20.14
31	K. Kotaiah	57.73
32	B. Jaggaiah	12.36
33	V. Narasimhalu	12.13
34	B. Rajagopala Rao	10.00
35	B. Ramaiah	10.29
36	P. Mohan Rao	9.37
37	B. Razan	8.06
38	V. Hanumantha Rao	10.00
39	B. Venkateshwara Rao	11.80
40	B. Patibhi Ramaiah	10.00
41	B. Krishnamurthy	10.40
42	K. Narayana Rao	8.00
43	K. Jaganmohan Rao	7.00
44	K. Padmavathamma	13.50

	Sriyuths	*Acre-Cents*
45	D. Venkata Appaiah	6.50
46	B. Raghu Ramaiah	6.00
	Total ...	881.31

Sugar-cane Paddy and other crops.

(*c*) These allotments were made after the Minister for Agriculture satisfied himself during his visit to Hospet in April, 1974 that the standing crop raised by the farmers was suffering for want of fertilisers which were not in stock in that District.

(*d*) No.

(*e*) Does not arise.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಇಲ್ಲಿ (ಸಿ)ಗೆ ಉತ್ತರವಾಗಿ ಏನು ತಿಳಿಸಿದ್ದಾರೆ ಅದನ್ನು ನೋಡಿದರೆ ಅಲ್ಲಿ ಸಾವಿರಾರು ಎಕರೆ ಭೂಮಿ ಬಿಟ್ಟಿದ್ದ ಬೆಳೆ ಗೊಬ್ಬರದ ತೊಂದರೆ ಇದ್ದರೂ ಕೇವಲ ಈ 881 ಎಕರೆಗೆ ಮಾತ್ರವೇ ಆ ತೊಂದರೆಯಿದೆ ಎಂದು ಹೇಳುವಂತೆ ಕಂಡುಬರುತ್ತಿದೆಯಲ್ಲವೆ ? ಹೀಗೆ ಇವರಿಗೆ ಮಾತ್ರವೇ ಈ ಸ್ಪೆಷಲ್ ಕೋಟ ಕೊಡುವುದಕ್ಕೇನು ಕಾರಣ ?

† ಶ್ರೀ ಎನ್. ಚಿಕ್ಕೇಗೌಡ.—ನಾನು ಆ ಪ್ರಾಂತ್ಯಕ್ಕೆ ಭೇಟಿ ಕೊಟ್ಟಿದ್ದಾಗ ಅಲ್ಲಿ ಆ ಕೃಷ್ಣ ನಗರದ ರೈತರು ಗೊಬ್ಬರವಿಲ್ಲದೆ ಬಹಳ ತೊಂದರೆಗೊಳಗಾಗಿದ್ದಾರೆಂದು ಮನವಿಗಳನ್ನು ಮಾಡಿ ಕೊಂಡರು. ಮತ್ತು ಅಲ್ಲಿ ಯಾವ ಸೊಸೈಟಿಗಳಲ್ಲೂ ಗೊಬ್ಬರವಿಲ್ಲದೆ ಇದ್ದ ಕಾರಣ ಅವರಿಗೆ ಇದನ್ನು ಕೊಟ್ಟಿದೆ

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಅಲ್ಲಿ ಇನ್ನೂ ಸಾವಿರಾರು ಎಕರೆಗಳಲ್ಲಿ ಬೆಳೆಯಿಟ್ಟಿದ್ದ ರೈತರಿಗೂ ಗೊಬ್ಬರ ಸಿಕ್ಕದೆ ನರಳುತ್ತಿದ್ದರು. ಅವರಿಗೂ ಕೂಡ ಇದೇ ರೀತಿಯಾಗಿ ಏಕೆ ಕೊಡಲಿಲ್ಲ ;

ಶ್ರೀ ಎನ್. ಚಿಕ್ಕೇಗೌಡ.—ಅವರು ಯಾರೂ ಇವರಂತೆ ಬಂದು ಒತ್ತಾಯಮಾಡಲಿಲ್ಲ, ಅದಕ್ಕಾಗಿ ಅವರಿಗೆ ಕೊಡಲಿಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಸರ್ಕಾರದವರು ಅವರಿಗೆ ಕೊಟ್ಟ ಈ ಸ್ಪೆಷಲ್ ಕೋಟ 41 ಟನ್ ಗೊಬ್ಬರವನ್ನು ಸಂಪೂರ್ಣವಾಗಿ ಬ್ಲಾಕ್ ಮಾರುಕಟ್ಟೆಯಲ್ಲಿ ಮಾರಾಟ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ನಾರಾಯಣದಾಸ್.—ಎಲ್ಲ ರೈತರಿಗೂ ತಲಾ 15 ಅಥವಾ 20 ಕೆ.ಜಿ. ರಾಸಾಯನಿಕ ಗೊಬ್ಬರ ಸಿಕ್ಕುವುದು ಕಷ್ಟವಾಗಿರುವಾಗ ಈ ಜನರಿಗೆ ಹೀಗೆ ಅಂದಾಜು ತಲಾ ಒಂದೊಂದು ಟನ್ ಗೊಬ್ಬರ ಕೊಡುವುದಕ್ಕೇನು ಕಾರಣ ?

ಶ್ರೀ ಎನ್. ಚಿಕ್ಕೇಗೌಡ.—ಅವರಿಗೆ ನಿಗದಿಮಾಡಿದ್ದ ಡೋಸೇಜ್ ಪ್ರಕಾರವೆ ಕೊಟ್ಟಿದೆ. ಜಾಸ್ತಿಯೇನೂ ಕೊಟ್ಟಿಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಅವರು ಈ ಸ್ಪೆಷಲ್ ಕೋಟ ಗೊಬ್ಬರವನ್ನು ಸಂಪೂರ್ಣವಾಗಿ ಬಾಕ್ಸ್‌ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿರುವುದರಿಂದ ಅದನ್ನು ತನಿಖೆ ಮಾಡುವುದಕ್ಕೆ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಲಾಗುವುದೇ ;

ಶ್ರೀ ಎನ್. ಚಿಕ್ಕೇಗೌಡ.—ಮಾಹಿತಿ ಕೊಟ್ಟರೆ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಎನ್, ಎಸ್. ಗುರುಸಿದ್ದಪ್ಪ.—ಈ ಗೊಬ್ಬರವನ್ನು ಆ ರೈತರಿಗೆ ನೇರವಾಗಿ ಕೊಡಲಾಯಿತೊ ಅಥವಾ ಸಹಕಾರ ಸಂಸ್ಥೆಗಳ ಮೂಲಕ ಕೊಡಲಾಯಿತೋ ?

ಶ್ರೀ ಎನ್. ಚಿಕ್ಕೇಗೌಡ.—ಅದನ್ನು ರೈತರಿಗೆ ಕೊಡಲಾಯಿತು.

ಶ್ರೀ ಡಿ. ನಾರಾಯಣದಾಸ್.—ಅವರಿಗೆ ಜಿಲ್ಲಾ ಸಹಕಾರ ಸಮಿತಿಯಿಂದ ಕೊಂಡುಕೊಳ್ಳಲು ಏಕೆ ತಿಳಿಸಲಿಲ್ಲ ?

ಶ್ರೀ ಎನ್. ಚಿಕ್ಕೇಗೌಡ.—ಅಲ್ಲಿ ಸ್ಟಾಕ್ ಇರಲಿಲ್ಲ.

Sri H. D. DEVE GOWDA.—Is it based on the recommendation of the Assistant Director of the local area or on the applications received directly from the farmers ?

Sri N. CHIKKE GOWDA.—Instructions were given to give the quota. When the Assistant Director was instructed, in view of the problems he was facing, he pleaded his inability to give it out of the normal quota. So, it was given from the discretionary quota.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಆ ಭಾಗದಲ್ಲಿ ಅನೇಕ ರೈತರು ತಾವು ಅಲ್ಲಿಗೆ ಬಂದಿದ್ದಾಗ ಈ ಗೊಬ್ಬರದ ಕೊಂದರೆಯನ್ನು ಅರಿಕೆ ಮಾಡಿಕೊಂಡಿದ್ದರೂ ಅವರಿಗೇಕೆ ಇದೇ ರೀತಿಯ ಸೌಲಭ್ಯ ತಾವು ಒದಗಿಸಲಿಲ್ಲ ?

ಶ್ರೀ ಎನ್. ಚಿಕ್ಕೇಗೌಡ.—ಅವರು ಅರ್ಜಿ ಕೊಟ್ಟಿದ್ದರೆ ಅವುಗಳನ್ನೂ ಪರಿಶೀಲನೆ ಮಾಡುತ್ತಿದ್ದೆ.

Filling up the Posts of Village Panchayat Secretaries and Village Accountants in North Kanara District

282. Sri V. M. GHADI (Haliyal).—

Will the Minister for Community Development and Social Welfare be pleased to state :—

(*a*) the number of Village Panchayat Secretaries in North Kanara District selected as Village Accountants in the year 1972 ;

(*b*) the number of Village Panchayats working without Secretaries or Village Accountants since 1972 ;

(*c*) the reasons for not fiilling up these posts so far ?

Sri N. RACHAIAH (Minister for Community Development and Social Welfare).—

(*a*) 32.

(*b*) 30 ; but the Talathis are attending to Village Panchayat work in these Village Panchayats.

(*c*) Since Talathis appointed under old rules are already working in the above mentioned 30 Village Panchayats, these posts cannot be filled in unless they retire from service or vacancies occur by promotion etc.,

ಶ್ರೀ ವಿ. ಎಂ. ಘಾಡಿ.—ಇಲ್ಲಿ ಗ್ರಾಮಲೆಕ್ಕಿಗರಿಲ್ಲದೆ ಕೆಲಸಮಾಡುತ್ತಿರುವ ಪಂಚಾಯಿತಿಗಳ ಸಂಖ್ಯೆ ಎಷ್ಟು ಎಂಬುದಕ್ಕೆ—30 ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಅಧಿಕಾರಿಗಳು ತಪ್ಪು ಸಂಖ್ಯೆಯನ್ನು ಕೊಟ್ಟಿದ್ದಾರೆ. ಅವರು ತಪ್ಪು ವರದಿಯನ್ನು ಮಾಡಿರುವವರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ?